ಗೋಪಾಲ್ ಯಾದವನಿಗೆ ಗೊತ್ತಾಗಿದ್ದು.

'ಆಳ...'

'ನಿನ್ನಷ್ಟೇ ಎತ್ತರವಿರಲಿ ಭಾಯಿ' ಸಿನಾನ್ ಅವನ ಅನೇಕ ಪ್ರಿಯತಮೆಯರ ಪೈಕಿ ಒಬ್ಬಳಾದ ರಿಯಾರಾಫಿಗೆ ಸಂದೇಶ ಕಳುಹಿಸುವ ಗಡಿಬಿಡಿಯಲ್ಲಿ ಹೇಳಿದ.

'ಅಗಲ?'

'ನಿನ್ನದೇ ಅಗಲ.'

ಗೋಪಾಲ್ ಯಾದವ್ ಪಿಕಾಸಿಯ ತುದಿಯಿಂದ ಮಣ್ಣಿನ ಮೇಲೆ ಗೆರೆ ಎಳೆದು ಗುರುತಿಸಿದ.

ಬೇಸಗೆಯ ಆರಂಭದ ದಿನಗಳು. ಬಿಸಿಲಿನ ಝಳವನ್ನು ಭೂಮಿಯ ಮೇಲೆ ಇಳಿಯ ಬಿಡದೆ, ತೆಂಗಿನ ಗರಿಗಳು ಅದಕ್ಕೆ ಅಡ್ಡಲಾಗಿ ಗಾಳಿಗೆ ಓಲಾಡುತ್ತಿದ್ದವು. ತನ್ನ ಕೆಲಸ ಸರಳವಾಗಿದ್ದಕ್ಕೆ ಗೋಪಾಲ್ ಯಾದವ್ ತೆಂಗಿನ ಮರಕ್ಕೆ ಕೃತಜ್ಞತೆ ಸಲ್ಲಿಸಿದ. ಮಣ್ಣಿನ ಗುಣಮಟ್ಟವನ್ನು ಗಮನಿಸಿದರೆ ಸಂಜೆಯಾಗುವಷ್ಟರಲ್ಲಿ ಒಂದು ಆಳು ಎತ್ತರ ಮತ್ತು ಅಗಲವಿರುವ ಗುಳಿ ತೋಡಬಹುದು. ಗೋಪಾಲ್ ಕೆಲಸ ಪ್ರಾರಂಭಿಸಿದ. ಈ ನಡುವೆ ಹುಡುಗ ಅವನ ಬಗ್ಗೆ ಕೆಲವು ವಿಷಯಗಳನ್ನು ಕೇಳಿ ತಿಳಿದುಕೊಂಡ. ಅನಂತರ ಗೂಗಲ್‌ನಲ್ಲಿ ನೇರವಾಗಿ ಲಾಲ್‌ಮಾತ್ತಿಯಾಗೆ ಹೋಗಿದ್ದು ಗೋಪಾಲ್ ಯಾದವನ ಅರಿವಿಗೆ ಬರಲಿಲ್ಲ.

'ಏಯ್ ಭಾಯ್, ಬಿಹಾರಿನಲ್ಲಿ ಲಾಲ್‌ಮಾತ್ತಿಯಾ ಎಂಬ ಊರೇ ಇಲ್ವಲ್ಲ' ಅವನು ಹೇಳಿದ. ಮಣ್ಣಿನಲ್ಲಿ ಹೂತು ಹೋಗಿದ್ದ ಪಿಕ್ಕಾಸಿಯನ್ನು ಹೊರಗೆಳೆಯದೆ ಗೋಪಾಲ್ ಯಾದವ್ ಸಿನಾನಿನತ್ತ ನೋಡಿದ.

'ಲಾಲ್ ಮಾತ್ತಿಯಾ ಬಿಹಾರಿನಲ್ಲೇ ಇದೆ. ಯೆ ಮೇರಾ ಗಾಂವ್ ಹೆ.'

'ತುಂ ಜೋಕ್ ಮತ್ ಭೊಲೊ ಭಾಯ್. ಅದಿರೋದ್ ಜಾರ್ಖಂಡ್‌ನಲ್ಲಿ... ನೋಡಿಲ್ಲಿ' ಸತ್ತವನ ಮುಖದಿಂದ ಬಿಳಿಯ ಬಟ್ಟೆಯ ಪರದೆಯನ್ನು ಸರಿಸುವಂತೆ, ಸಿನಾನ್ ಮೊಬೈಲಿನ ಪರದೆಯನ್ನು ಸರಿಸಿದ. ಬಿಹಾರಿನಿಂದ ಜಾರ್ಖಂಡ್‌ಗೆ ಹೋದ ಲಾಲ್‌ಮಾತ್ತಿಯವನ್ನು ಗೋಪಾಲ್ ಯಾದವನಿಗೆ ತೋರಿಸಿದ. ತನ್ನಂತೆಯೇ ತನ್ನ ಊರು ಬಿಹಾರಿನಿಂದ ದೂರವಾಗಿದೆ. ಅವನು ದೀರ್ಘವಾಗಿ ಉಸಿರೆಳೆದ. ಅನಂತರ ನಿಧಾನವಾಗಿ ಉಸಿರನ್ನು ಹೊರಬಿಟ್ಟ. ಪ್ರೀತಿ ಪಾತ್ರರು ಯಾರಾದರೂ ತೀರಿಕೊಂಡರೆ ಅವನು ಹಾಗೆ ಮಾಡುತ್ತಿದ್ದುದುಂಟು.

ಗೋಪಾಲ್ ಯಾದವ್ ಮಣ್ಣಿನಲ್ಲಿ ಹೂತು ಹೋಗಿದ್ದ ಪಿಕ್ಕಾಸಿಯನ್ನು ಹೊರಕ್ಕೆಳೆದ. ಹಾಗೆ ಹೊರಬಂದಾಗ ಒಂದು ಮಣ್ಣಿನ ಹೆಂಟೆಯೂ ಇಡಿಯಾಗಿ ಬಂತು. ಅದರಲ್ಲಿ ಅವನು ತನ್ನ ಬಿಹಾರ ರಾಜ್ಯವನ್ನು ಸಂಕಲ್ಪಿಸಿದ. ಆತನ ಕಣ್ಣುಗಳು ತುಂಬಿದವು. ಕೋಪದಿಂದ ಪಿಕ್ಕಾಸಿನ ಹಿಡಿಯಿಂದ ಮಣ್ಣಿನ ಹೆಂಟೆಗೆ ಜೋರಾಗಿ ಬಡಿದ. ಅದು ತಲೆಬುರುಡೆಯಂತೆ ಎರಡು ಹೋಳಾಯಿತು. ಒಂದು ಬಿಹಾರ ಮತ್ತೊಂದು ಜಾರ್ಖಂಡ್!

'ಇದರಲ್ಲಿ ನಾನೆಲ್ಲಿರುವೆ?' ಅವನು ತನ್ನನ್ನೇ ಕೇಳಿಕೊಂಡ. ಮತ್ತೆ ಏನಾಯಿತೋ ನೆನಪಿಲ್ಲ... ಅವರೆಲ್ಲಾ ಸಾಲಾಗಿ ಪ್ರಯಾಣಿಸುತ್ತಿದ್ದಾರೆ. ಯಾದವರು ಕೊಯೇರಿಗಳು, ಸಾಂತಳರು...

ಪೆಡಲಿಲ್ಲದ ಪ್ರತಿಯೊಂದು ಸೈಕಲಿನ ಬಾರಿನ ಮೇಲೆ ಇನ್ನೂರೈವತ್ತು ಕೆಜಿ ತೂಕದ ಕಲ್ಲಿದ್ದಲಿದೆ. ದುಸ್ತರವಾದ ರಸ್ತೆಯಲ್ಲಿ ಬೆಟ್ಟವನ್ನು ಹತ್ತುತ್ತಿದ್ದಾನೆ. ಏದುಸಿರು ಹೊರ ಹೊಮ್ಮುತ್ತಿದೆ. ಗಾಳಿ ತುಂಬಿದ ಶ್ವಾಸಕೋಶ ಪಕ್ಕೆಲುಬುಗಳನ್ನು ಮುರಿದು ಹೊರಬಹುದೆಂದು